# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿಸಿ ನಂ. 1006/2024

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

**ವಿರುದ್ಧ**

ಆರೋಪಿತರುಃ 1. ರವಿಕುಮಾರ್ ತಂದೆ ಸುರೇಶ, 27 ವರ್ಷ
2. ಮಂಜುನಾಥ ತಂದೆ ಸುರೇಶ, 26 ವರ್ಷ
ಇಬ್ಬರ ವಾಸಃ ಬಗ್ಗನಾಡು ಗ್ರಾಮ,
ಹಿರಿಯೂರು ತಾಲ್ಲೂಕು

## ದೋಷಾರೋಪಣೆ

**ನಾನು ಶ್ರೀಮತಿ. ಸುಜಾತ ಸುವರ್ಣ.ಬಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ**

ದಿನಾಂಕ 19.05.2024 ರಂದು ಸಂಜೆ 6.30 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಬಗ್ಗನಾಡು ಗ್ರಾಮದ ಸರ್ಕಾರಿ ಪ್ರಾರ್ಥಮಿಕ ಶಾಲೆಯ ಹಿಂಭಾಗದ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.4 ರವರ ನಾಯಕತ್ವ ಕ್ರಿಕೆಟ್ ಟೀಂ ನಲ್ಲಿ ಚಾಸಾ.1 ರವರು ಆಟವಾಡಿ ಪಂಧ್ಯದಲ್ಲಿ ಸೋತಿದ್ದು, ಪಂಧ್ಯ ಮುಗಿದ ನಂತರ 1 ಮತ್ತು 2 ನೇ ಆರೋಪಿತರು ಚಾಸಾ.1 ರವರಿಗೆ ಶಾಂತಿಭಂಗವುಂಟು ಮಾಡುವ ಉದ್ದೇಶದಿಂದ ಅವರನ್ನು ಉದ್ರೇಕಿಸುವ ಸಲುವಾಗಿ ಲೇ ಸೂಳೆ ಮಗನೇ ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 504 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದು ನಿಮ್ಮಗಳ ಪೈಕಿ 1 ನೇ ಆರೋಪಿಯು ಸ್ವಇಚ್ಚೆಯಿಂದ ಚಾಸಾ.1 ರವರಿಗೆ ನಿನಗೆ ಆಟವಾಡಲು ಬರದಿದ್ದರೆ ಹೊರಗೆ ಇರಬೇಕು ನಿನ್ನಿಂದಲೇ

ಪಂಧ್ಯ ಸೋತಿದ್ದು ಎಂದವರೇ ತನ್ನ ಕೈಯಲ್ಲಿದ್ದ ಬ್ಯಾಟ್ ನಿಂದ ಎದೆಗೆ ಗುದ್ದಿ ನೋವುಂಟುಪಡಿಸಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 324 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದು ನಿಮ್ಮಗಳ ಪೈಕಿ 1 ನೇ ಆರೋಪಿಯು ಸ್ವಇಚ್ಛೆಯಿಂದ ಚಾಸಾ.1 ಎಡಗಾಲಿನ ಮೊಣಕಾಲು ಬಳಿ ಹೊಡೆದಿದ್ದು ನಂತರ 2 ನೇ ಆರೋಪಿಯು ಕೈ ಕಾಲುಗಳಿಂದ ಮೈ ಕೈ ಗೆ ಹೊಡೆದು ನೋವುಂಟುಪಡಿಸಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 323 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವುಗಳು ಹೋಗುವಾಗ ಚಾಸಾ.1 ರವರನ್ನು ಕುರಿತು ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಪ್ರಾಣ ತೆಗೆಯುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 506 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

( ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ 17.03.2026
ಸ್ಥಳಃ ಹಿರಿಯೂರು

(ಸುಜಾತ ಸುವರ್ಣ. ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಹಿರಿಯೂರು.